

# ವಿದ್ಯಾಗಣಪತಿ ವರ್ಧಂತಿ ಉತ್ಸವ

ಸಾಗರ ಸಾಮ್ರಾಟ ಸಮಾಚಾರ

**ಕಾರವಾರ:** ಕೆಎಲ್ಎಸ್‌ವಿ ಡಿ ಐ ಟಿ ಹಳಿಯಾಳದ ಆವರಣದಲ್ಲಿರುವ ವಿದ್ಯಾ ಗಣಪತಿ ದೇವರ 11ನೆಯ ವರ್ಧಂತಿ ಉತ್ಸವ ಸೋಮವಾರ ವಿಜೃಂಭಣೆಯಿಂದ ಜರುಗಿತು.

ವರ್ಧಂತಿ ಉತ್ಸವದ ಪ್ರಯುಕ್ತ ದೇವತಾ ಕಾರ್ಯಗಳಾದ ಗಣ ಹೋಮ, ನವಗ್ರಹ ಶಾಂತಿ, ಸತ್ಯ ಗಣಪತಿ ಕಥೆ ಹಮ್ಮಿಕೊಳ್ಳಲಾಗಿತ್ತು. ಶ್ರೀ ರಾಮಚಂದ್ರ ಭಟ್, ಶ್ರೀ ಲಕ್ಷ್ಮಣ್ ಹಾನಗಲ್ ಧಾರ್ಮಿಕ ಕಾರ್ಯಕ್ರಮ ನೆರವೇರಿಸಿದರು.

ಎ ಐ ಅಂಡ್ ಎಂ ಎಲ್ ವಿಭಾಗದ ಮುಖ್ಯಸ್ಥ ಡಾ. ವೆಂಕಟೇಶ ಶಂಕರ್ ಪೂಜೆಯಲ್ಲಿ ಭಾಗವಹಿಸಿ ಪೂರ್ಣಹುತಿ ಅರ್ಪಿಸಿದರು. ವಿದ್ಯಾರ್ಥಿಗಳಾದ ಕುಮಾರಿ. ಸೃಷ್ಟಿ ಸುಗಟೆ, ಕು. ಆದಿತ್ಯ ಸಿಂಗ್, ಕುಆದಿತ್ಯ ಮಧುಸೂದನ್, ಕುಮಾರಿ. ಸುಹಾಸಿನಿ ಪಾಠಕ್, ಕುಮಾರಿ. ವೈಷ್ಣವಿ ಕುಲಕರ್ಣಿ ಭಕ್ತಿ ಸಂಗೀತ ಸಾದರಪಡಿಸಿದರು. ಪೂರ್ಣಹುತಿ ಹಾಗೂ ಮಹಾಮಂಗಳಾರತಿಯ ನಂತರ ಸದ್ಭಕ್ತರೆಲ್ಲರಿಗೂ ಪ್ರಸಾದ ವಿತರಿಸಲಾಯಿತು.

ನಿವೃತ್ತ ಜಿಲ್ಲಾ ನ್ಯಾಯಾಧೀಶ ಜೆ ಎಸ್ ದೇಶಪಾಂಡೆ, ಪ್ರೊ. ಮಂಜುನಾಥ್.ಪ್ರೊ ಎಸ್ ಡಿ ಕುಲಕರ್ಣಿ, ಪ್ರೊ ರೋಹಿಣಿ ಕಲ್ಲೂರ್, ಮಹಾವಿದ್ಯಾಲಯದ ಬೋಧಕ ಬೋಧಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾದರು ಎಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ತಿಳಿಸಿದ್ದಾರೆ.

**ಸಂಕ್ಷಿಪ್ತ ಲೋಕ**

# ವಿದ್ಯಾ ಗಣಪತಿ ದೇವರ ವರ್ಧಂತಿ ಉತ್ಸವ

**ಹಳಿಯಾಳ:** ಕೆಎಲ್‌ಎಸ್‌ವಿಡಿಐಟಿ ಆವರಣದಲ್ಲಿರುವ ವಿದ್ಯಾ ಗಣಪತಿ ದೇವರ 11ನೇ ವರ್ಧಂತಿ ಉತ್ಸವವು ವಿಜೃಂಭಣೆಯಿಂದ ಜರುಗಿತು.

ವರ್ಧಂತಿ ಉತ್ಸವದ ಪ್ರಯುಕ್ತ ದೇವತಾ ಕಾರ್ಯಗಳಾದ ಗಣ ಹೋಮ, ನವಗ್ರಹ ಶಾಂತಿ, ಸತ್ಯ ಗಣಪತಿ ಕಥೆ ಹಮ್ಮಿಕೊಳ್ಳಲಾಗಿತ್ತು. ರಾಮಚಂದ್ರ ಭಟ್, ಲಕ್ಷ್ಮಣ ಹಾನಗಲ್ ಧಾರ್ಮಿಕ ಕಾರ್ಯಕ್ರಮ ನೆರವೇರಿಸಿದರು. ಎಐ ಮತ್ತು ಎಂ. ಎಲ್. ವಿಭಾಗದ ಮುಖ್ಯಸ್ಥ ಡಾ. ವೆಂಕಟೇಶ ಶಂಕರ್ ಪೂಜೆಯಲ್ಲಿ ಭಾಗವಹಿಸಿ ಪೂರ್ಣಾಹುತಿ ಅರ್ಪಿಸಿದರು. ವಿದ್ಯಾರ್ಥಿಗಳಾದ ಸೃಷ್ಟಿ ಸುಗಟೆ, ಆದಿತ್ಯ ಸಿಂಗ್, ಆದಿತ್ಯ ಮಧುಸೂದನ್, ಸುಹಾಸಿನಿ ಪಾಠಕ್, ವೈಷ್ಣವಿ ಕುಲಕರ್ಣಿ ಭಕ್ತಿ ಸಂಗೀತ ಸಾದರಪಡಿಸಿದರು. ಪೂರ್ಣಾಹುತಿ ಹಾಗೂ ಮಹಾ ಮಂಗಳಾರತಿಯ ನಂತರ ಸದ್ಭಕ್ತರೆಲ್ಲರಿಗೂ ಪ್ರಸಾದ ವಿತರಿಸಲಾಯಿತು. ನಿವೃತ್ತ ಜಿಲ್ಲಾ ನ್ಯಾಯಾಧೀಶ ಜೆ. ಎಸ್. ದೇಶಪಾಂಡೆ, ಪ್ರೊ. ಮಂಜುನಾಥ್, ಪ್ರೊ. ಎಸ್. ಡಿ. ಕುಲಕರ್ಣಿ, ಪ್ರೊ. ರೋಹಿಣಿ ಕಲ್ಲೂರ್, ಮಹಾವಿದ್ಯಾಲಯದ ಬೋಧಕ ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾದರು ಎಂದು ಪ್ರಾಚಾರ್ಯ ಡಾ. ವಿ. ಎ. ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

